**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/462/ಎಸಿಎಂ(2)/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560 001,
ದಿನಾಂಕ:01-06-2013.

**-:: ಸುತ್ತೋಲೆ ::-**

**ವಿಷಯ:** **2013-14ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ಕಾರ್ಯಾಗಾರದ ಕುರಿತು.**

**ಉಲ್ಲೇಖ:** 1. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013.
2. ದಿ:06-05-2013ರಂದು ನಿದೇಶನಾಲಯದಲ್ಲಿ ನಡೆದ ಸಭಾ ನಡುವಳಿಗಳು.

**-0000000-**

ಉಲ್ಲೇಖ(1)ರ ಸರ್ಕಾರಿ ಆದೇಶದ ಪ್ರಕಾರ 2013-14ನೇ ಸಾಲಿನಿಂದ ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಾಗಲೇ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ರಾಜ್ಯದ 45 Online Application Submission/Document Verification Centre ಗಳಲ್ಲಿ ವಿತರಿಸಲಾಗುತ್ತಿದ್ದು, ಅರ್ಜಿಗಳನ್ನು ಸಲ್ಲಿಸಲು ದಿನಾಂಕ:25-05-2013ರಂದು ಕಡೆ ದಿನಾಂಕವಾಗಿರುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ದಿ:01-06-2013ರೊಳಗೆ ವಿಸ್ತರಿಸಿ ಅನುಮತಿ ನೀಡಲಾಗಿರುತ್ತದೆ.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಮಾಹಿತಿಯನ್ನು ಹಾಗೂ ಇನ್ನಿತರೆ ಅಗತ್ಯ ಮಾಹಿತಿ ನೀಡುವ ನಿಟ್ಟಿನಲ್ಲಿ **ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ದಿನಾಂಕ:03-06-2013ರಂದು ಪೂರ್ವಾಹ್ನ 11.00 ಗಂಟೆಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.** ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವ ಅಧಿಕಾರಿ/ಸಿಬ್ಬಂದಿವರ್ಗದವರು ತಪ್ಪದೇ ಈ ಕೆಳಕಂಡ ಮಾಹಿತಿಯನ್ನು ತರಲು ಈ ಮೂಲಕ ತಿಳಿಸಲಾಗಿದೆ.

1. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಅರ್ಜಿಗಳು.
2. ಸ್ವೀಕೃತ ಪತ್ರ (ಕಛೇರಿ ಪ್ರತಿ).
3. ಬ್ಯಾಂಕ್ ಚಲನ್‌ನ ವಿವರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿ MS EXCEL ನಲ್ಲಿ ನಮೂದಿಸಿ ಸಾಫ್ಟ್‌ಕಾಪಿ ಮತ್ತು ಹಾರ್ಡ್ ಕಾಪಿಯನ್ನು ತರತಕ್ಕದ್ದು.
4. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಯ Submitted Application Report ನ ಸಾಫ್ಟ್‌ಕಾಪಿ ಮತ್ತು ಹಾರ್ಡ್ ಕಾಪಿಯನ್ನು ತರತಕ್ಕದ್ದು.

ಪ್ರಯುಕ್ತ, ಮೇಲ್ಕಂಡ ಮಾಹಿತಿಯ ವಿವರಗಳನ್ನು ತಪ್ಪದೇ ದಿನಾಂಕ:03-06-2013ರಂದು ಪೂರ್ವಾಹ್ನ 11.00 ಗಂಟೆಗೆ ಕಾರ್ಯಾಗಾರಕ್ಕೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

**ಕಾರ್ಯಾಗಾರ ಸ್ಥಳ:- ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಅರಮನೆ ರಸ್ತೆ, ಬೆಂಗಳೂರು.**
**ಸಮಯ: ದಿನಾಂಕ:03-06-2013ರ ಪೂರ್ವಾಹ್ನ 11:00 ಗಂಟೆಗೆ**

ನಿರ್ದೇಶಕರು

**ಗೆ,**

**ಎಲ್ಲಾ 45 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ** (Online Application Submission/Document Verification Centre)

File 462-12 (Dip_ADm_2013)

**ಪ್ರತಿ:-**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ತಾಂ.ಶಿ.ನಿ, (ಈ ಸುತ್ತೋಲೆಯನ್ನು ನಿರ್ದೇಶನಾಲಯದ ಅಂತರ್ ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸುವುದು).
6. ಕಛೇರಿ ಪ್ರತಿ.

**ವಿಶೇಷ ಸೂಚನೆಗಳು:-**

ಈಗಾಗಲೇ 2013-14ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಗಳ ಪರಿಷ್ಕೃತ ವೇಳಾಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಪ್ರಚುರಪಡಿಸಲಾಗಿದೆ. ಮುಂದುವರೆದಂತೆ, ಈ ಕೆಳಕಂಡ ಅಂಶಗಳನ್ನು ತುರ್ತಾಗಿ ಗಮನಿಸಿ ಕೂಡಲೇ ಕ್ರಮ ಜರುಗಿಸತಕ್ಕದ್ದು.

1. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವಾಗ ಕೆಲವೊಂದು ಕೇಂದ್ರಗಳಲ್ಲಿ ಬಹಳಷ್ಟು ಅಭ್ಯರ್ಥಿಗಳ ಮಾಹಿತಿಗಳು ತಪ್ಪಾಗಿ ದಾಖಲಾಗಿರುವುದು ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ದಿ:01-06-2013ರಂದೇ ಆಯಾ ಕೇಂದ್ರಗಳಲ್ಲಿ ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡಲಾದ ಅರ್ಜಿಗಳ ವಿವರಗಳನ್ನು www.diplomaadmissions .in ವೆಬ್‌ಸೈಟ್‌ನಲ್ಲಿ ಲಭ್ಯವಿರುವ Online Application Submission status ಟ್ಯಾಬ್‌ನ್ನು ಒತ್ತಿದ ನಂತರ, ಅರ್ಜಿ ಸಂಖ್ಯೆ ನಮೂದಿಸಿದಲ್ಲಿ ಅಭ್ಯರ್ಥಿಯ ವಿವರಗಳು ಲಭ್ಯವಾಗುತ್ತದೆ. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯಲ್ಲಿನ ವಿವರಗಳನ್ನು ಅಪ್‌ಲೋಡ್ ಮಾಡಲಾದ ವಿವರಗಳೊಂದಿಗೆ ತಾಳೆ ಮಾಡಿ ತಪ್ಪುಗಳಿದ್ದಲ್ಲಿ ಪಟ್ಟಿ ಮಾಡತಕ್ಕದ್ದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸಹ ಸದರಿ ವೆಬ್‌ಸೈಟ್‌ನಲ್ಲಿ ದಾಖಲಾದ ಎಲ್ಲಾ ವಿವರಗಳನ್ನು ನೋಡಬಹುದಾಗಿದೆ. ಮತ್ತು ತಪ್ಪುಗಳಿದ್ದಲ್ಲಿ ಸಂಬಂಧಿಸಿದ 45 ಕೇಂದ್ರಗಳ ಪ್ರಾಂಶುಪಾಲರುಗಳ ಗಮನಕ್ಕೆ ತಂದು ಸರಿಪಡಿಸಿಕೊಳ್ಳಬಹುದಾಗಿದೆ.
2. ದಿನಾಂಕ:02-06-2013ರಂದು ಅಭ್ಯರ್ಥಿಗಳ ತಪ್ಪಾಗಿ ಅಪ್‌ಲೋಡ್ ಮಾಡಲಾದ ವಿವರಗಳನ್ನು ತಿದ್ದುಪಡಿ ಮಾಡಲು ಸಂಬಂಧಪಟ್ಟ 45 ಕೇಂದ್ರಗಳ ಪ್ರಾಂಶುಪಾಲರುಗಳಿಗೆ ಅನುಮತಿಯನ್ನು ನೀಡಲಾಗುತ್ತಿದೆ. ಆದ್ದರಿಂದ, ದಿ:02-06-2013ರ ಭಾನುವಾರದಂದು ಕಛೇರಿ ಕೆಲಸ ನಿರ್ವಹಿಸುವ ಮುಖಾಂತರ, ತಿದ್ದುಪಡಿಗಳಿದ್ದಲ್ಲಿ ಸಂಪೂರ್ಣವಾಗಿ ಸರಿಪಡಿಸುವುದು ಎಲ್ಲಾ 45 ಕೇಂದ್ರಗಳ ಪಾಂಶುಪಾಲರುಗಳ ಜವಾಬ್ದಾರಿಯಾಗಿರುತ್ತದೆ.
3. ಈಗಾಗಲೇ ಸಿ.ಬಿ.ಎಸ್.ಇ ಅಭ್ಯರ್ಥಿಗಳ ಎಸ್.ಎಸ್.ಎಲ್.ಸಿ ಅಂಕಗಳು ಲಭ್ಯವಿಲ್ಲದೇ ಶೂನ್ಯ ಅಂಕಗಳನ್ನು ಅಪ್‌ಲೋಡ್ ಮಾಡಿರುವುದು ತಿಳಿದುಬಂದಿರುತ್ತದೆ. ಎಲ್ಲಾ 45 ಕೇಂದ್ರಗಳ ಪಾಂಶುಪಾಲರುಗಳು ಸದರಿ ಅಭ್ಯರ್ಥಿಗಳನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಅಂಕಪಟ್ಟಿಯನ್ನು ದಿನಾಂಕ:02-06-2013ರಂದು ಸಲ್ಲಿಸುವಂತೆ ತಿಳಿಸಿ ಆನ್‌ಲೈನ್ ಮುಖಾಂತರ ಅಂಕಗಳನ್ನು ನಮೂದಿಸುವುದು.

ಮೇಲಿನ ಅಂಶಗಳ ಬಗ್ಗೆ ತೆಗೆದುಕೊಂಡ ಕ್ರಮದ ವರದಿಯನ್ನು ದಿನಾಂಕ:03-06-2013ರಂದು ನಡೆಯುವ ಕಾರ್ಯಾಗಾರದಲ್ಲಿ ತಪ್ಪದೇ ಸಲ್ಲಿಸತಕ್ಕದ್ದು.